# ವೈದ್ಯರ ದಿನಾಚರಣೆ

**ಚಿತ್ರದುರ್ಗ, ಜು. 1** - ಭಾರತೀಯ ಸಮಾಜ ಅತ್ಯಂತ ಯಶಸ್ವಿ ಜನರಾದ ವಿಜ್ಞಾನಿಗಳು, ವೈದ್ಯರು, ಆದರ್ಶಪುರುಷರು ಮೊದಲಾದವರನ್ನು ನಿರೀಕ್ಷಿಸುತ್ತದೆ. ಪ್ರತಿಯೊಬ್ಬರಿಗೂ ಸ್ಫೂರ್ತಿ ಬೇಕು. ಸ್ಫೂರ್ತಿ ಬದುಕನ್ನು ಅರಳಿಸುತ್ತದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆದ ವೈದ್ಯ ದಿನಾಚರಣೆಯನ್ನು ಗಿಡ ನೆಡುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಬುದ್ಧ, ಬಸವ, ಪೈಗಂಬರ್, ಏಸು, ಗಾಂಧೀಜಿ, ಅಂಬೇಡ್ಕರ್, ಸರ್ ಎಂ.ವಿಶ್ವೇಶ್ವರಯ್ಯ ಮೊದಲಾದವರು ಪ್ರೇರಣೆಗೆ ಒಳಗಾಗಿದ್ದರು. ಹಾಗಾಗಿ ಅವರದು ಶ್ರೇಷ್ಠವಾದ ಬದುಕಾಗಿತ್ತು. ಪ್ರತಿಯೊಬ್ಬರು ಜೀವನವನ್ನು ಚಾಲೆಂಜ್ ಆಗಿ ತೆಗೆದುಕೊಳ್ಳಬೇಕು. ಸೂರ್ಯನ ಬೆಳಕು ಬದುಕನ್ನು ಅರಳಿಸುತ್ತದೆ. ದಿನಕರನ ಮನೆಯಲ್ಲಿ ಕಮಲ ಅರಳುವ ಹಾಗೆ ಎನ್ನುವ ಬಸವಣ್ಣನವರ ಮಾತಿನಂತೆ ಪ್ರತಿಯೊಬ್ಬರಲ್ಲು ಸ್ಫೂರ್ತಿ ಇರಬೇಕು.  ಸ್ಫೂರ್ತಿ ಕ್ರಾಂತಿಗೆ ಅವಕಾಶ ಮಾಡಿಕೊಡುತ್ತದೆ. ಕ್ರಾಂತಿ ಎಂದರೆ ವ್ಯಕ್ತಿತ್ವ ವಿಕಾಸ. ಪ್ರೇರಣೆ ನಮಗೆ ಬೇಕು. ಆದರ್ಶವಿಲ್ಲದ ಬದುಕು ಬದುಕಲ್ಲ. ಅದು ನಮ್ಮನ್ನು ಸೋಮಾರಿಗಳನ್ನಾಗಿಸುತ್ತದೆ. ನಮ್ಮದು ಕಾಯಕ ಪ್ರಧಾನ ಬದುಕಾಗಬೇಕು. ಕಾಯಕ ಪ್ರಧಾನವಾದ ಜನರು ಸಿಗುವುದು ವಿರಳ. ಕಾಯಕ ಪ್ರಧಾನವಾದ ದೇಶ ಹಾರ್ದಿಕವಾಗಿರುತ್ತದೆ. ಶರಣಸಂಸ್ಕøತಿ ನಮ್ಮ ಬದುಕನ್ನು ಅರಳಿಸುವ ಶ್ರಮ ಸಂಸ್ಕøತಿಯಾಗಿದೆ ಎಂದರು.

ಪ್ರಸ್ತುತ ಸಂದರ್ಭದಲ್ಲಿ ವೈದ್ಯರು, ನರ್ಸ್‍ಗಳ ಸೇವೆ ತುಂಬಾ ಅವಶ್ಯಕತೆಯಿದೆ. ಅವರು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರದು ಸಹ ಶ್ರಮಸಂಸ್ಕøತಿ. ಹಾಗಾಗಿ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ ಎಂದು ತಿಳಿಸಿದರು.

ಕಾಲೇಜಿನ ಡೀನ್ ಡಾ|| ಜಿ. ಪ್ರಶಾಂತ್ ಪ್ರಾಸ್ತಾವಿಕವಾಗಿ ಮಾತನಾಡುತ್ತ, ಡಾ|| ಬಿ.ಸಿ.ರಾಯ್ ಅವರು ಪಶ್ಚಿಮ ಬಂಗಾಳದಲ್ಲಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರು. ಆ ಸಂದರ್ಭದಲ್ಲಿಯೂ ವೈದ್ಯಕೀಯ ಸೇವೆಯನ್ನು ಮಾಡಿದ್ದಾರೆ ಎಂಬುದೇ ಹೆಗ್ಗಳಿಕೆ. ರಾಜಕೀಯ ಹಾಗು ವೈದ್ಯಕೀಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು.
ಇದೇ ಸಂದರ್ಭದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಸಂಸ್ಥಾಪಕರಾದ ಡಾ. ಬಿ.ಸಿ.ರಾಯ್ ಅವರ ಭಾವಚಿತ್ರಕ್ಕೆ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಡಾ|| ಪಾಲಾಕ್ಷಯ್ಯ, ಡಾ|| ರಾಜೇಶ್ ವೇದಿಕೆಯಲ್ಲಿದ್ದರು. ಡಾ|| ಮಹೇಶ್, ಡಾ|| ಗೌರಮ್ಮ, ಡಾ|| ನಾಗೇಂದ್ರರೆಡ್ಡಿ, ಡಾ|| ವಾಗೀಶ್, ಡಾ|| ಯೋಗೀಂದ್ರ ಮೊದಲಾದವರಿದ್ದರು.

ಡಾ|| ನಾರಾಯಣಮೂರ್ತಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಡಾ|| ರಾಜೇಶ್ ವಂದಿಸಿದರು.






6. B.Sc. Medical Laboratory Technology – 20
Seats


1. B.Sc. Respiratory Care Technology – 20 Seats
2. B.Sc. Imaging Technology – 20 Seats
3. B.Sc. Dialysis Technology – 20 Seats
4. B.Sc. Emergency Medicine – 20 Seats
5. B.Sc. Optometry – 20 Seats
6. B.Sc. Medical Laboratory Technology – 20

